## 16. GOVERNMENT HIGH SCHOOL, ARAKERE,BHADRAVATHI

ಸರ್ಕಾರಿ ಪ್ರೌಢಶಾಲೆ ಅರಕೆರೆ 2003-04 ರಲ್ಲಿ, 8ನೇ ತರಗತಿ ಪ್ರಾರಂಭವಾಗಿತ್ತು. ಒಬ್ಬರು ವಿಜ್ಞಾನ ಶಿಕ್ಷಕರು ಮತ್ತು ಒಬ್ಬರು ಕಲಾ ಶಿಕ್ಷಕರಿಂದ ಪ್ರಾರಂಭವಾಗಿ ಶಿಕ್ಷಕರ ಕೊರತೆಯನ್ನು ಅನುಭವಿಸಿತು. 2005-06 ರಿಂದ ಎಲ್ಲ ಶಿಕ್ಷರು ವರ್ಗಾವಣೆಯಿಂದ ಆಗಮಿಸಿದ್ದರಿಂದ ಪಾಠ-ಪ್ರವಚನಗಳಿಗೆ ಅನುಕೂಲವಾಯಿತು. 2005-06 ರಲ್ಲಿ ಮೊದಲನೇ S.S.L.C ಪರೀಕ್ಷೆಯನ್ನು ಎದುರಿಸಲು ಶೈಕ್ಷಣಿಕವಾಗಿ ತಯಾರಿ ಮಾಡಿಕೊಂಡಿದ್ದರಿಂದ 86% ಫಲಿತಾಂಶಕ್ಕೆ ಬುನಾದಿಯಾಯಿತು. ಪ್ರಾರಂಭದಲ್ಲಿ ಪ್ರಾಥಮಿಕ ಶಾಲಾ ಕಟ್ಟಡದಲ್ಲಿ ಪಾಠ-ಪ್ರವಚನಗಳು ನಡೆಯುತ್ತಿದ್ದವು. ಸ್ಥಳೀಯ ಮುಖಂಡರ ಸಹಾಯದಿಂದ ಹೊಸ ಕಟ್ಟಡಕ್ಕೆ ಪ್ರಯತ್ನಿಸಿ ಸಫಲವಾಗಲಾಯಿತು.

2007-08 ರಲ್ಲಿ ಹೊಸ ಕಟ್ಟಡ ನಿರ್ಮಾಣವಾಯಿತು, ಆದರೆ ಮೂಲ ಸೌಕರ್ಯಗಳಾದ ಶೌಚಾಲಯ, ಕುಡಿಯುವ ನೀರು, ಇತ್ಯಾದಿ ಸೌಲಭ್ಯಗಳಿರಲಿಲ್ಲ. ಸ್ಥಳೀಯ ದಾನಿಗಳ ಸಹಕಾರದಿಂದ ಶೌಚಾಲಯ ಹಾಗು ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಯಿತು. ಜೊತೆಗೆ ಕ್ರೀಡೆ, ಕಲೆ, ಸಂಸ್ಕೃತಿಯಲ್ಲಿ ನಿತ್ಯವೂ ಹೊಸತನದ ತರಬೇತಿ ಇತ್ಯಾದಿಗಳನ್ನು ಆಯೋಜಿಸಿಕೊಂಡು ಉತ್ತಮ ಅಭಿವೃದ್ಧಿಯತ್ತ ಸಾಗಲು ಪ್ರಯತ್ನಿಸಾಯಿತು.

ಭೌದ್ದಿಕವಾಗಿ ಬೆಳವಣಿಗೆಗೆ ಬೇಕಾದ ಪರಿಕರಗಳೊಂದಿಗೆ ಪ್ರಯತ್ನಮಾಡಲಾಯಿತು.ಹಾಗು ಶಾಲೆಯ ಭೌತಿಕ ಆಕರ್ಷಣೆಗೆ ಪ್ರಯತ್ನ ಪ್ರಾರಂಭಿಸಲಾಯಿತು. ಬೀಳು-ಬೀಳಾಗಿದ್ದ ಶಾಲೆಯ ಮುಂಭಾಗವನ್ನು ಒಂದು ಸುಂದರ ಕೈತೋಟ ಮಾಡಲು ಬಯಸಿ ರೂಪು-ರೇಷೆ ತಯಾರಿಸಲಾಯಿತು. ಎಲ್ಲವನ್ನು ಯೋಜನಾ ಬದ್ದವಾಗಿ ಯೋಜಿಸಿಕೊಂಡು ಶಿಕ್ಷಕರು ಹಾಗು ವಿದ್ಯಾರ್ಥಿಗಳೇ ಕೆಲಸವನ್ನು ಪ್ರಾರಂಭಿಸಲಾಯಿತು.

ಸ್ಥಳೀಯರ ಸಹಕಾರ ಪಡೆದು ಅಂಕು-ಡೊಂಕಾಗಿದ್ದ ಭೂಮಿಯನ್ನು ಟ್ರ್ಯಾಕ್ಟರ್ ಮೂಲಕ ಸಮಗೊಳಿಸಿ ನೀರಿನ ಸರಬರಾಜಿಗೆ ಪೈಪ್ ಲೈನನ್ನು ವಿದ್ಯಾರ್ಥಿಗಳು ಹಾಗು ಶಿಕ್ಷಕರು ಒಟ್ಟಿಗೆ ಸೇರಿ ಮಾಡಲಾಯಿತು. ನಂತರ ಹತ್ತಿರವಿರುವ ರಂಗಯ್ಯನ ಬೆಟ್ಟದಿಂದ 11 ಟಿಪ್ಪರ್ ಲೋಡ್ ಕೆಮ್ಮಣ್ಣನ್ನು ತರಿಸಿ, ವಿದ್ಯಾರ್ಥಿಗಳು ಹಾಗು ಶಿಕ್ಷಕರು ಸೇರಿ ಗಿಡಗಳಿಗೆ ಬೇಕಾದ ಸಿಮೆಂಟ್ ರಿಂಗ್ ನಿರ್ಮಿಸಲಾಯಿತು. ಸ್ಥಳಿಯ ಜಿಲ್ಲಾ ಪಂಚಾಯತ್ ಸದಸ್ಯರ ಸಹಕಾರದಿಂದ ವಿವಿಧ ಕಡೆಗಳಿಂದ ಹುಲ್ಲು ಹಾಗು ಉತ್ತಮ ಜಾತಿಯ ಗಿಡಗಳನ್ನು ತರಿಸಿ, ಅವುಗಳನ್ನು ನೆಟ್ಟು ಪೋಷಿಸಲಾಯಿತು. ಇನ್ನು ರಸ್ತೆಗಳು ಮಣ್ಣಿನವೇ ಆಗಿದ್ದವು, ಮಕ್ಕಳಿಗೆ ಓಡಾಡಲು ತೊಂದರೆಯಾಗುತ್ತಿತ್ತು. ಇದನ್ನು ಸಿಮೆಂಟಿನ ರಸ್ತೆಗಳನ್ನಾಗಿಸಲು ಸ್ಥಳೀಯರ ಸಹಕಾರ ಪಡೆದು ಸಿಮೆಂಟ್ ರಸ್ತೆಗಳನ್ನು ಮಾಡಿಸಲಾಯಿತು. ದಿನಕಳೆದಂತೆ ಗಂಡು ಹಾಗು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಮತ್ತು ನೀರಿಗಾಗಿ ಜಿಲ್ಲಾ ಪಂಚಾಯತ್ ಸದಸ್ಯರ ಸಹಕಾರದಿಂದ ಒಂದು ಬೋರ್ ವೆಲ್ ಹಾಗು ಇತರೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಮಾಡಿಸಲಾಗಿದೆ.

ಇದಲ್ಲದೆ ಸೈಕಲ್ ಸ್ಟ್ಯಾಂಡ್, ಕಂಪ್ಯೂಟರ್ ವ್ಯವಸ್ಥೆ, ಸ್ಮಾರ್ಟ್ ಕ್ಲಾಸ್ ವ್ಯವಸ್ಥೆ, ಆಕರ್ಷಕ ಧ್ವಜದ ಸ್ಥಂಭ, ಕೈತೋಟ, ಸುಂದರ ವಾತಾವರಣದಿಂದ ಈಗ ಶಾಲೆಯು ತುಂಬಾ ಆಕರ್ಷಕವಾಗಿದೆ. ಒಂದು ಕಡೆ ಶೈಕ್ಷಣಿಕ ಪ್ರಗತಿ, ಮತ್ತೊಂದು ಕಡೆ ಭೌತಿಕ ಪರಿಸರ ಇವೆರಡೂ ಸೇರಿ ಒಂದು ಸುಂದರ ವಾತಾವರಣ ಸೃಷ್ಠಿಯಾಗಿದೆ. ಎಷ್ಟೆಂದರೆ ಬೇರೆ-ಬೇರೆ ಕಡೆಗಳಿಂದ ಅನೇಕ ಜನರು ಶಾಲೆ ವೀಕ್ಷಣೆ ಮಾಡಲು ಬರುತ್ತಾರೆ. ಈಗ ಶಾಲಾ ಆವರಣದಲ್ಲಿ ನೂರಕ್ಕಿಂತಲೂ ಹೆಚ್ಚು ಔಷಧಿ ಸಸ್ಯಗಳಿವೆ. ಇದೊಂದು ಶಾಲೆಯನ್ನುವುದಕ್ಕಿಂತ, ಉತ್ತಮ ಪರಿಸರ ಹೊಂದಿರುವ ಒಂದು ರಮ್ಯ ತಾಣವಾಗಿದೆ. ಈ ಎಲ್ಲಾ ಕೆಲಸಗಳನ್ನು ಸ್ಥಳೀಯ ದಾನಿಗಳು ಮುಖಂಡರ ಹಾಗು ಊರಿನ ನಾಗರಿಕರ ಸಹಕಾರದಿಂದ ಪಡೆಯಲಾಗಿದೆ. ಊರಿನವರ ಜೊತೆಗೆ ಉತ್ತಮ ಬಾಂಧವ್ಯ ಬೆಳೆಸಿಕೊಂಡರೆ, ಒಂದು ಉತ್ತಮ ಶಾಲೆಯನ್ನು ಕಟ್ಟಬಹುದಾಗಿದೆ ಎಂಬುದಕ್ಕೆ ಇದೊಂದು ಉತ್ತಮ ಉದಾಹರಣೆಯಾಗಿದೆ.
















ಸರ್ಕಾರಿ ಪ್ರೌಢಶಾಲೆ ಅರಕೆರೆ